ಓ ಎಸ್ ನಂಃ 1002-14
ಪಿ ಡಬ್ಲ್ಯೂ ಃ 1

**ದಿಃ 04-06-2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.**

**ಮುಂದುವರೆದ ಪಾಟೀ ಸವಾಲುಃ ಶ್ರೀ ಬಿ ವಿ ಕೆ ವಕೀಲರಿಂದ**

42. ನಾನು ಆಂಗ್ಲ ಮತ್ತು ಕನ್ನಡ ಭಾಷೆಯಲ್ಲಿ ಸಹಿ ಮಾಡುತ್ತೇನೆ ಎಂದರೆ ಸಾಕ್ಷಿಯು ಯಾರಾದರೂ ಕನ್ನಡದಲ್ಲಿ ನನ್ನ ಸಹಿ ಸರಿಯಾಗಿ ಬರುವುದಿಲ್ಲ ಎಂದರೆ ನಾನು ಆಂಗ್ಲ ಭಾಷೆಯಲ್ಲಿ ಸಹಿ ಮಾಡುತ್ತೇನೆ ಎಂದು ನುಡಿಯುತ್ತಾರೆ.

43. ಸಾಕ್ಷಿಗೆ ಒಂದು ಕ್ರಯಪತ್ರದ ದೃಢೀಕೃತ ನಕಲನ್ನು ತೋರಿಸಲಾಗಿ ಅದರಲ್ಲಿರುವ ತನ್ನ ಸಹಿಯನ್ನು ಸಾಕ್ಷಿಯು ಗುರುತಿಸಿದ್ದು ಸದರಿ ದೃಢೀಕೃತ ಕ್ರಯಪತ್ರವನ್ನು ನಿಡಿ 2 ಎಂದು ಗುರುತಿಸಿ ನಿಡಿ2 ರಲ್ಲಿ ಸಾಕ್ಷಿ ತನ್ನ ಸಹಿಯನ್ನು ಗುರುತಿಸಿದ್ದರ ಮೇರೆಗೆ ಅದನ್ನು ನಿಡಿ 2(ಎ) ಎಂದು ಗುರುತಿಸಲಾಯಿತು.

44. ಸಾಕ್ಷಿಗೆ ಮತ್ತೊಂದು ಕ್ರಯಪತ್ರದ ದೃಢೀಕೃತ ನಕಲನ್ನು ತೋರಿಸಲಾಗಿ ಅದರಲ್ಲಿರುವ ತನ್ನ ಸಹಿಯನ್ನು ಸಾಕ್ಷಿಯು ಗುರುತಿಸಿದ್ದು ಸದರಿ ದೃಢೀಕೃತ ಕ್ರಯಪತ್ರವನ್ನು ನಿಡಿ 3 ಎಂದು ಗುರುತಿಸಿ ನಿಡಿ3 ರಲ್ಲಿ ಸಾಕ್ಷಿ ತನ್ನ ಸಹಿಯನ್ನು ಗುರುತಿಸಿದ್ದರ ಮೇರೆಗೆ ಅದನ್ನು ನಿಡಿ 3(ಎ) ಎಂದು ಗುರುತಿಸಲಾಯಿತು.

45. ಸಾಕ್ಷಿಗೆ ಈಗ ಟಿಪ್ಪಣಿಯ ಜೊತೆ ಇರುವ ಪೊಸೆಸರ್ ಪ್ರತಿಯನ್ನು ತೋರಿಸಲಾಗಿ ಸದರಿ ಪ್ರತಿಯಲ್ಲಿ ಸಾಕ್ಷಿ ತನ್ನ ಜಮೀನಿಗೆ ಸಂಬಂದಪಟ್ಟ ತನ್ನ ಹೆಸರು ಇರುವುದಾಗಿ ಗುರುತಿಸಿದ್ದರ ಮೇರೆಗೆ ನಿಡಿ 4 ಎಂದು ಗುರುತಿಸಲಾಯಿತು.

46. ಸಾಕ್ಷಿಗೆ ಮೂಲ ಟಿಪ್ಪಣಿ ನಕಲನ್ನು ತೋರಿಸಲಾಗಿ ಸಾಕ್ಷಿಯು ತನ್ನ ಜಮೀನಿಗೆ ಸಂಬಂದಪಟ್ಟ ದಾಖಲಾತಿ ಎಂದು ಗುರುತಿಸಿದ್ದರ ಮೇರೆಗೆ ಅದನ್ನು ನಿಡಿ 5 ಎಂದು ಗುರುತಿಸಲಾಯಿತು.

ನಿಪಿ 2 ರಿಂದ 26 ರವರೆಗೂ ಇರುವ ದಾಖಲಾತಿಗಳಲ್ಲಿ ನನ್ನ ಹೆಸರು ಮತ್ತು ನನ್ನ ಪೂರ್ವಜರ ಹೆಸರು ದಾವಾ ಸ್ವತ್ತಿನ ವಿಚಾರವಾಗಿ ಇರುವುದಿಲ್ಲ ಎಂದರೆ ಇರುತ್ತದೆ ನನ್ನ ತಾತನ ಹೆಸರು ಇರುತ್ತದೆ ಎಂದು ನುಡಿಯುತ್ತಾರೆ.

47. ನಿಪಿ 30 ಮತ್ತು 31 ಪ್ರತಿವಾದಿಗಳ ಕುಟುಂಬದ ವಿಭಾಗಕ್ಕೆ ಸಂಬಂದಪಟ್ಟ ದಾವೆಗೆ ಸೇರಿದ ದಾಖಲಾತಿಗಳು ಆಗಿರುತ್ತವೆ ಎಂದರೆ ಸುಳ್ಳು.

ನಿಪಿ 33 ರಲ್ಲಿರುವ ದಾಖಲಾತಿಗೂ ನಮ್ಮ ಕುಟುಂಬಕ್ಕೂ ಸಂಬಂದ ಇರುವುದಿಲ್ಲ ಎಂದರೆ ಸರಿಯಲ್ಲ. ನಿಪಿ 34 ರಲ್ಲಿರುವ ದಾವೆ ನಮ್ಮ ಜಮೀನಿನಲ್ಲಿ ಅಕ್ರಮವಾಗಿ ಸದರಿ ದಾವೆಯಲ್ಲಿರುವ ಪ್ರತಿವಾದಿಗಳು ಪ್ರವೇಶ ಮಾಡಿರುತ್ತಾರೆ ಎಂದು ದಾವೆಯನ್ನು ಹೂಡಲಾಗಿದೆ. ನಿಪಿ 34 ರಲ್ಲಿ ತೋರಿಸಲಾಗಿರುವ ವಾದಿ

ಮತ್ತು ಪ್ರತಿವಾದಿಗಳಿಗೆ ಮತ್ತು ನನಗೆ ಯಾವುದೇ ಸಂಬಂದ ಇರುವುದಿಲ್ಲ. ನಿಪಿ35ನ್ನು ಯಾವ ಉದ್ದೇಶಕ್ಕೆ ನ್ಯಾಯಾಲಯದಲ್ಲಿ ಸಲ್ಲಿಸಲಾಗಿದೆ ಎಂದರೆ ಸಾಕ್ಷಿಯು ಸದರಿ ದಾವೆಯಲ್ಲಿರುವ ಪ್ರತಿವಾದಿಗಳು ನೋಟಿಸ್ ನೀಡಿದರೂ ಬಾರದೇ ಇದ್ದ ಕಾರಣ ನಾನು ಅವರ ಮೇಲೆ ದಾವೆಯನ್ನು ಸಲ್ಲಿಸಿದ್ದೆ ಎಂದು ನುಡಿಯುತ್ತಾರೆ.

48. ನಿಡಿ 2ರಲ್ಲಿ ಹೇಳಲಾಗಿರುವ ಕ್ರಯಪತ್ರದಲ್ಲಿರುವ ಚಕ್ಕುಬಂದಿಯ ಬಗ್ಗೆ ತಿಳಿದುಕೊಂಡು ನಾನು ಸಹಿ ಮಾಡಿರುತ್ತೇನೆ. ಸದರಿ ನಿಡಿ 2ರಲ್ಲಿ ದಕ್ಷಿಣ ದಿಕ್ಕಿಗೆ ಹನುಮಂತಯ್ಯ ಗೋಪಾಲ್ ರವರ ಜಮೀನು ಎಂದು ಬರೆಯಲಾಗಿದೆ ಎಂದರೆ ಸುಳ್ಳು. ಸದರಿ ಹನುಮಂತಯ್ಯ ಮತ್ತು ಗೋಪಾಲ್ ರವರು ಪ್ರತಿವಾದಿ 9 ಮತ್ತು 11 ಎಂದರೆ ಸುಳ್ಳು. ನಿಡಿ2ರಲ್ಲಿ ತೋರಿಸಲಾಗಿರುವ ಚಕ್ಕುಬಂದಿ ತಪ್ಪಾಗಿರುತ್ತದೆ. ನಿಡಿ 2ರ ಚಕ್ಕುಬಂದಿಯಲ್ಲಿ ನನ್ನ ಜಮೀನಿನ ಉಳಿಕೆ ಭೂಮಿ ಇರುವುದಿಲ್ಲ ಎಂದರೆ ಸಾಕ್ಷಿ 2 ಎಕರೆ 24 ಗುಂಟೆ ಜಮೀನು ಇರುತ್ತದೆ ಎಂದು ನುಡಿಯುತ್ತಾರೆ.

49. ಚಿಕ್ಕಗುಜ್ಜಾರಯ್ಯ ಮತ್ತು ಕರೇಹನುಮಯ್ಯರವರು ಅವರ ಜೀವಿತಾವಧಿಯಲ್ಲಿ ವಿಭಾಗವಾಗಿದ್ದರು ಎಂದು ನಾನು ಹೇಳಿರುತ್ತೇನೆ ಎಂದರೆ ಸಾಕ್ಷಿಯು ನಾನು ಆ ರೀತಿ ಹೇಳಿರುವುದಿಲ್ಲ ಸುಳ್ಳು ಎಂದು ನುಡಿಯುತ್ತಾರೆ. ಕರೆಹನುಮಯ್ಯ ಮತ್ತು ಚಿಕ್ಕಗುಜ್ಜಾರಯ್ಯರವರು ನನ್ನ ಪ್ರಕಾರ ಗಂಗಯ್ಯರವರ ಮಕ್ಕಳು ಎಂದರೆ ಸರಿ. ಸಾಕ್ಷಿಯು ಮುಂದುವರೆದು ಗಂಗಯ್ಯರವರ ಹೆಂಡತಿ ಹೆಸರು ಗಾಳಮ್ಮ ಎಂದು ನುಡಿಯುತ್ತಾರೆ. ಕರೇಹನುಮಯ್ಯ ಮತ್ತು ಚಿಕ್ಕಗುಜ್ಜಾರಯ್ಯರವರು ಯಾವ ದಿನವೂ ಜೊತೆಯಲ್ಲಿರಲಿಲ್ಲ. ಚಿಕ್ಕಗುಜ್ಜಾರಯ್ಯ ಮತ್ತು ಕರೇಹನುಮಯ್ಯರವರು ಜೊತೆಯಲ್ಲಿದ್ದಾಗ ಯಾವ ಆಸ್ತಿಗಳನ್ನು ಖರೀದಿಸಿರುತ್ತಾರೆ ಎನ್ನುವ ವಿಷಯ ನನಗೆ ಗೊತ್ತಿದೆಯೇ ಎಂದರೆ ಗೊತ್ತಿಲ್ಲ ಎಂದು ನುಡಿಯುತ್ತಾರೆ.

50. ಕರೇಹನುಮಯ್ಯರವರು ಮತ್ತು ಚಿಕ್ಕಗುಜ್ಜಾರಯ್ಯರವರ ಕುಟುಂಬಸ್ಥರು ಯಾವ ಆಸ್ತಿಗಳನ್ನು ಹೊಂದಿದ್ದರು ಎಂದು ನನಗೆ ಗೊತ್ತಿರುತ್ತದೆ. ಕರೇಹನುಮಯ್ಯರವರ ಕುಟುಂಬವು ಸರ್ವೆ ನಂ 26/1 ರಲ್ಲಿ 11 ಎಕರೆ 37 ಗುಂಟೆ ಜಮೀನು ಮತ್ತು ಇತರೆ ಜಮೀನುಗಳು ಇರುತ್ತವೆ.

**ಈ ಹಂತದಲ್ಲಿ ಪಾಟೀ ಸವಾಲು ಮುಂದುವರೆಸಲು ಕಾಲವಕಾಶ ಕೋರಿದ್ದಾರೆ ನೀಡಲಾಗಿದೆ.**

**(ಉಕ್ತ ಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೇ ಸ ಇ ಎ ಓ**

**ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು,**

ಮಾಗಡಿ.